ಒ.ಎಸ್. - 31/2025

ಪಿ.ಡಬ್ಲ್ಯು - 01

**ದಿನಾಂಕ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ಪ್ರತಿವಾದಿಯರ ಪರ ಎ ಎಂ ವಕೀಲರಿಂದಃ**

ಪ್ರತಿವಾದಿ ಜಾನ್ ಸಿಕ್ವೇರ ನನಗೆ ಚಿಕ್ಕ ವಯಸ್ಸಿನಿಂದ ಪರಿಚಯಸ್ಥರು. ಅವರು ನಮ್ಮ ಸಂಬಂಧಿಕರಲ್ಲ . ನಾನು ಪಿಯುಸಿ ವರೆಗೆ ವ್ಯಾಸಾಂಗ ಮಾಡಿರುತ್ತೇನೆ . ಪ್ರತಿವಾದಿ ಜಾನ್ ಸಿಕ್ವೇರಾ ಎಷ್ಟು ಓದಿದ್ದಾರೆ ಎಂದು ನನಗೆ ಗೊತ್ತಿಲ್ಲ. 2013 ರಲ್ಲಿ ಪ್ರತಿವಾದಿ ಜಾನ್ ಸಿಕ್ವೇರಾಗೆ 10 ಲಕ್ಷ ಹಣಕೊಟ್ಟಿದ್ದೇನೆ ಎಂದು ಹೇಳುವ ಬಗ್ಗೆ ಕರಾರು ಮಾಡಿಕೊಂಡಿಲ್ಲ. ಸಾಕ್ಷಿ ಮುಂದುವರಿದು ಆದರೇ ನಾನು ಬ್ಯಾಂಕಿನಿಂದ ಹಣವನ್ನು ವರ್ಗಾಯಿಸಿದ್ದೇನೆ ಎಂದು ತಿಳಿಸಿರುತ್ತಾರೆ . ಆ ಸಮಯದಲ್ಲಿ ಕರಾರು ಮಾಡಿಕೊಳ್ಳಲು ತೊಂದರೆ ಇರಲಿಲ್ಲ, ಆದರೇ ಅವರು ಭರವಸೆ ಇಡಿ ಎಂದು ಹೇಳಿದ್ದರು. ಪ್ರತಿವಾದಿ ಒಂದು ವರ್ಷದ ಒಳಗಾಗಿ ಹಣ ಕೊಡುವುದಾಗಿ ಹೇಳಿದ್ದರು. ಫೆಬ್ರವರಿ 2014 ರ ನಂತರ ನಾನು ಪ್ರತಿವಾದಿಗೆ ನೋಟಿಸು ಕೊಟ್ಟಿಲ್ಲ. 23-05-2023 ರಂದು ಪ್ರತಿವಾದಿ ನನಗೆ ಚೆಕ್ ಕೊಟ್ಟಿದ್ದರು . ಸದರಿ ಚೆಕ್ ನಗದೀಕರಣಗೊಂಡಿದೆ . 2013 ರಲ್ಲಿ ನಾನು ಪ್ರತಿವಾದಿಗೆ 10 ಲಕ್ಷ ಕೊಟ್ಟಿದ್ದೆ 2023 ರಲ್ಲಿ ಪ್ರತಿವಾದಿ ನನಗೆ 10 ಲಕ್ಷ ವಾಪಸ್ಸು ಕೊಟ್ಟಿರುತ್ತಾರೆ ಎಂದರೆ ಸರಿ. 2013 ರಲ್ಲಿ ಹಣ ಕೊಡುವ ಸಮಯದಲ್ಲಿ ಬಡ್ಡಿಯ ವಿಚಾರವನ್ನು/ ಪ್ರಸ್ತಾಪ ಮಾಡಿಲ್ಲ ಮತ್ತು ಮಾತನಾಡಿರುವುದಿಲ್ಲ . 2015 ರಿಂದ 2020 ರವರೆಗೆ ನಾನು ಹೇಳುವ 10 ಲಕ್ಷವನ್ನು ಪ್ರತಿವಾದಿ ಪಡೆದುಕೊಂಡ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ . ನಾನು ಮಣಿಪುರ ಕೆನರಾ ಬ್ಯಾಂಕ್ ವನ್ನು ನಾನು ಖಾತೆ ಹೊಂದಿರುತ್ತೇನೆ ಮತ್ತು ಈ ಎಲ್ಲಾ ವ್ಯವಹಾರವನ್ನು ಅದರಿಂದ ಮಾಡಿರುತ್ತೇನೆ . 2013 ರಲ್ಲಿ 10 ಲಕ್ಷ ಹಣ ಪಡೆದು 1 ವರ್ಷದ ಅವದಿಯ ಒಳಗಾಗಿ ಕೊಡುತ್ತೇನೆ ಎಂದು ಹೇಳಿದ್ದು ಪ್ರತಿವಾದಿ

ಹೇಳಿದ ಪ್ರಕಾರ ಹಣ ಕೊಡದೇ ಇದ್ದರೂ ಸಹ ಪುನಃ 2015 ರಲ್ಲಿ ಆತನಿಗೆ ಏಕೆ 10 ಲಕ್ಷ ಕೊಟ್ಟಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2015 ರಲ್ಲಿ ಅವರು ನಮ್ಮ ಮನೆಗೆ ಬಂದು ತಾವು ತುಂಬಾ ಕಷ್ಟದಲ್ಲಿ ಇರುವುದಾಗಿ ಮತ್ತು ರಿಯಲ್ ಎಸ್ಟೇಟ್ ನಿಂದ ನಷ್ಟವಾಗಿದ್ದು ಹಣ ಬೇಕು ಎಂದು ಕೇಳಿದ್ದರಿಂದ ಕೊಟ್ಟಿರುತ್ತೇನೆ. 2015 ರಲ್ಲಿ ಹಣ ಕೊಟ್ಟಿದ್ದೇನೆ ಎಂದು ಹೇಳುವ ಸಮಯದಲ್ಲಿ ಯಾವುದೇ ಕರಾರು ಮಾಡಿಕೊಂಡಿಲ್ಲ . ಸಾಕ್ಷಿಗೆ ನಿಪಿ 1 ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ಸದ್ರಿ Stamp paper ನ್ನು ತಾವೇ ಖರೀದಿಸಲಾಗಿದೆ ಎಂದು ಕಾಣಿಸಲಾಗಿದೆ ಎಂದರೆ ಸರಿ . ನಿಪಿ 1 ನ್ನು ಟೈಪ್ ಮಾಡುವಾಗ ಯಾರು ಮಾಹಿತಿ ಕೊಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಮಾಹಿತಿ ಕೊಟ್ಟಿಲ್ಲ ವಕೀಲರೇ ಮಾಹಿತಿ ಕೊಟ್ಟಿರುತಾರೆ ಎಂದು ತಿಳಿಸಿರುತ್ತಾರೆ . ನಿಪಿ 1 ರಲ್ಲಿ ಮೊದಲನೇ ಸಾಕ್ಷಿದಾರ ನನ್ನ ಕಡೆಯವರು . 2 ನೇ ಯವರು ಯಾರು ಎಂದು ಗೊತಿಲ್ಲ. 2 ನೇ ಸಾಕ್ಷಿದಾರರನ್ನು ಪ್ರತಿವಾದಿ ಕರೆದುಕೊಂಡು ಬಂದಿದ್ದರು . ನಿಪಿ 1 ಕ್ಕೆ ಸಹಿಗಳನ್ನು ನಾನು ವಕೀಲರ ಕಚೇರಿಯಲ್ಲಿಯೇ ಮಾಡಿರುತ್ತೇನೆ. ವಕೀಲರ ಕಚೇರಿಗೆ ನಾನು ಮತ್ತು ನನ್ನ ಸಾಕ್ಷಿದಾರ ಹೋಗಿರುತ್ತೇವೆ. 2015 ರಿಂದ 2020 ರ ತನಕ ಅಬುದಾಬಿದಲ್ಲಿ ಇದ್ದೆ . ಸಾಕ್ಷಿ ಮುಂದುವರಿದು ವರ್ಷಕ್ಕೆ ಒಮ್ಮೆ ಭಾರತಕ್ಕೆ ಬರುತಿದ್ದೆ ಎಂದು ತಿಳಿಸಿರುತ್ತಾರೆ . 2020 ರಲ್ಲಿ ನಾನು ಮಾಡಿಕೊಂಡ ಕರಾರು ನಿಪಿ 2 ಮತ್ತು 3 ಪಹಣಿ ಪತ್ರಿಕೆಗಳಿಗೆ ಸಂಬಂದಪಟ್ಟಂತೆ ಮಾಡಿಕೊಂಡಿಲ್ಲ . ಸದ್ರಿ ಕರಾರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ . ನಿಪಿ 1 ರಲ್ಲಿ ಪುಟ 3 ರಲ್ಲಿ 3 ನೇ ಪ್ಯಾರಾದಲ್ಲಿ 31-03-2021 ರವರ ಒಳಗೆ ಹಣವನ್ನು ವಾಪಸ್ತು ಕೊಡಬೇಕು ಮತ್ತು ಅದಕ್ಕೆ ಯಾವುದೇ ಬಡ್ಡಿ ಇಲ್ಲ ಎಂದು ಬರೆಯಲಾಗಿದೆ ಎಂದರೆ ಸರಿ . ಪ್ರತಿವಾದಿಯನ್ನು ಬಿಟ್ಟು ನಾನು ಬೇರೆಯವರಿಗೆ ಹಣ ಕೊಟ್ಟಿಲ್ಲ . 23-05-2023 ರಲ್ಲಿ ಪ್ರತಿವಾದಿಯಿಂದ ನಾನು ಒಂದು ಚೆಕ್ ಸಂಖ್ಯೆ 414747 ನ್ನು ಪಡೆದು ಅದನ್ನು ನಗದೀಕರಿಸಿಕೊಂಡಿರುತ್ತೇನೆ ಎಂದರೆ ಸರಿ . ಸದ್ರಿ ಚೆಕ್ ನ ಅಡಿಯಲ್ಲಿ 10 ಲಕ್ಷ ಹಣವನ್ನು ನಾನು ಪಡೆದುಕೊಂಡಿರುತ್ತೇನೆ . ಅದೇ ರೀತಿ ಚೆಕ್ ನಂ

562129 ದಿ 26-07-2023 ದ ಚೆಕ್ ನಲ್ಲಿ ಎಷ್ಟು ಹಣ ಪಡೆದುಕೊಂಡಿದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ನಾನು ಯವೂದೇ ಹಣ ಸದ್ರಿ ಚೆಕ್ ನಲ್ಲಿ ಪಡೆದಿಲ್ಲ ಎಂದು ತಿಳಿಸಿರುತ್ತಾರೆ . 2015 ರಿಂದ 2026 ರ ತನಕದ ನನಗೆ ಸೇರಿದ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ನ್ನು ನ್ಯಾಯಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.   ದಿ 26-07-2023 ರಂದು ಚೆಕ್ ನಂ 562129  ನ್ನು ಹಾಕಿ ಒಟ್ಟು 1,50,000 ಹಣವನ್ನು ಪ್ರತಿವಾದಿಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.   ಅದೇ ರೀತಿ ಪ್ರತಿವಾದಿ 3,50,000 ನ್ನು ನಗದು ರೂಪದಲ್ಲಿ ಸಾಕ್ಷಿಗಳ ಸಮ್ಮುಖದಲ್ಲಿ ನಾನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.   ಪ್ರತಿವಾದಿಯ ವಿರುದ್ದ ರೂ 20 ಲಕ್ಷಕ್ಕೆ ಮಾನನಷ್ಟ ಮೊಕದಮ್ಮೆ ಕೇಸನ್ನು ನಾನು ಹಾಕಿಲ್ಲ . ಮಾನನಷ್ಟ ಮೊಕದಮ್ಮೆ ಹಾಕುವ ಬಗ್ಗೆ ನಮ್ಮ ವಕೀಲರ ಬಳಿ ನಾನು ಯಾವುದೇ ಸೂಚನೆ ಕೊಟ್ಟಿಲ್ಲ . ಸಾಕ್ಷಿಗೆ ಒಂದುದಾಖಲೆಯನ್ನು ತೋರಿಸಿ ಸದ್ರಿ ದಾಖಲೆಯ ಆದಾರದ  ಅಡಿಯಲ್ಲಿ ಪ್ರತಿವಾದಿಗೆ 20 ಲಕ್ಷಕ್ಕೆ ಮಾನನಷ್ಟ ಮೊಕದಮ್ಮೆ ಹೂಡುವುದಾಗಿ ನೋಟಿಸು ಕೊಟ್ಟಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ನಾನು ಕೊಟ್ಟಿಲ್ಲ ಅದರಲ್ಲಿ ಹೆರಾಲ್ಡ ಡಿಸೋಜ ಸದ್ರಿ ನೋಟಿಸು ಕೊಟ್ಟಿರುತ್ತಾರೆ ನನ್ನ ಹೆಸರು ರಫೆಲ್ ಡಿಸೋಜ ಎಂದು ತಿಳಿಸಿರುತ್ತಾರೆ.  ಹೆರಾಲ್ಡ್ ಡಿಸೋಜ ನನ್ನ ತಮ್ಮ . ಪ್ರತಿವಾದಿ ವಿರುದ್ದ ನನಗೆ ಯಾವುದೇ ವೈಮನಸ್ಸು ಇರಲಿಲ್ಲ ಮತ್ತು ಇರುವುದಿಲ್ಲ . ಪ್ರತಿವಾದಿ ಕೊಟ್ಟ ಜವಾಬು ನೋಟಿಸನ್ನು ನಾನು ಓದಿ ತಿಳಿದುಕೊಂಡಿಲ್ಲ ಆದರೇ ಅದರಲ್ಲಿ ಇರುವ ಮುಖ್ಯ ವಿಷಯ ನನಗೆ ಗೊತ್ತು . ಈ ದಾವೆಯನ್ನು ಹಾಕುವಾಗ ಪ್ರತಿವಾದಿ ವಕೀಲರು ಕೊಟ್ಟಿದ್ದ ಜವಾಬು ನೋಟಿಸನ್ನು ಹಾಜರಪಡಿಸಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ . ಪಹಣಿ ಪತ್ರಿಕೆ ಮತ್ತು ಇತರೇ ದಾಖಲಾತಿಗಳನ್ನು ನಾನೇ ಹಾಜರುಪಡಿಸಿರುತ್ತೇನೆ . ಪ್ರತಿವಾದಿ ಕಳುಹಿಸಿರುವ ಪ್ರತ್ಯುತ್ತರ ನೋಟಿಸಿನ ಬಗ್ಗೆ ನನ್ನ ವಕೀಲರು ಮಾಹಿತಿ ಕೊಟ್ಟಿರುತ್ತಾರೆ. ಪ್ರತ್ಯುತ್ತರ ನೋಟಿಸಿನಲ್ಲಿ ನಮೂದು ಮಾಡಿರುವ ಬಗ್ಗೆ ನನ್ನ ತಕರಾರು ಇರುತ್ತದೆ. ಸದ್ರಿ  ಪ್ರತ್ಯುತ್ತರದಲ್ಲಿ ಇರುವ

ವಿಚಾರಗಳಾದ ಮತ್ತೊಂದು ಚೆಕ್ ನ್ನು ಕೊಟ್ಟಿರುವುದಾಗಿ ಮತ್ತು 1,50,000 ಹಣವನ್ನು ನಗದಿನ ರೂಪದಲ್ಲಿ ಕೊಟ್ಟಿರುವ ಬಗ್ಗೆ ಮತ್ತು 3,50,000 ನಗದಿನ ರೂಪದಲ್ಲಿ ಸಾಕ್ಷಿದಾರರ ಸಮಕ್ಷಮ ಕೊಟ್ಟಿರುವ ವಿಚಾರಗಳು ಸುಳ್ಳಾಗಿರುತ್ತದೆ. ಆ ವಿಚಾರಗಳನ್ನು ಬಿಟ್ಟು ಬೇರೆ ವಿಚಾರಗಳ ಬಗ್ಗೆ ಕೂಡ ನನ್ನ ತಕರಾರು ಇರುತ್ತಾರೆ .       ನಿಪಿ-5 ನಾನು ನಮ್ಮ ವಕೀಲರ ಮುಖೇನ ಕೊಟ್ಟ ನೋಟಿಸು . ಸದರಿ ನೋಟಿಸಿನ ಪ್ರಕಾರ ಪ್ರತಿವಾದಿ 20 ಲಕ್ಷ ಹಣ ಪಡೆದಿರುವುದಾಗಿ ಹೇಳಿದ್ದೇನೆ ಎಂದರೆ ಸರಿ . 20 ಲಕ್ಷ ವ್ಯವಹಾರಕ್ಕೆ ಸಂಬಂದಪಟ್ಟಂತೆ ನಾನು ಹ್ಯಾಂಡ್ ಲೋನ್ ಕರಾರನ್ನು ಮಾಡಿಕೊಂಡಿರುತ್ತೇನೆ. 2013 ರಿಂದ 2022 ರ ತನಕ ಪ್ರತಿವಾದಿಗೆ ಯಾವುದೇ ನೋಟಿಸು ಕೊಡದೇ ಇರಲು ಕಾರಣ ಏನು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿ ನಮ್ಮ ಗ್ರಾಮ ಪಂಚಾಯತಿನಲ್ಲಿ ಉಪಾಧ್ಯಕ್ಷರು ಮತ್ತು ನಮ್ಮ ಚರ್ಚ್ ನಲ್ಲಿ ಪ್ರತಿನಿಧಿ , ಕಾಂಗ್ರೇಸ್ ಪಕ್ಷದ ಹಿಂದುಳಿದ ವರ್ಗಗಳ ನಮ್ಮ ಗ್ರಾಮದ ಅಧ್ಯಕ್ಷರು. ಆದ್ದರಿಂದ ನಾನು ನೋಟಿಸು ಕೊಡಲಿಲ್ಲ . 2013 ರಿಂದ ಪ್ರತಿವಾದಿ ಹಣ ಕೊಡದೇ ಇದ್ದಾಗ ಪೊಲೀಸರಿಗೆ ನಾನು ದೂರು ಕೊಟ್ಟಿಲ್ಲ . ಪ್ರತಿವಾದಿ 10 ಲಕ್ಷ ಹಣ ಪಡೆದು ಕೊಟ್ಟಿಲ್ಲ ಎಂದು ದೂರು ಕೊಡಲು ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಅವರ ಹೆಸರು ಹಾಳಾಗುತ್ತದೆ ಎಂದು ನಾನು ಕೊಡಲಿಲ್ಲ . ಪ್ರತಿವಾದಿ ನಮ್ಮ ಕುಟುಂಬದ ಸದಸ್ಯರಲ್ಲ . ನನ್ನ ತಮ್ಮ ಪ್ರತಿವಾದಿಗೆ ಮಾನನಷ್ಟ ಮೊಕದಮ್ಮೆ ಹಾಕುವ  ಬಗ್ಗೆ ಕೊಟ್ಟ ನೋಟಿಸಿನ ಬಗ್ಗೆ ನನಗೆ ಗೊತ್ತಿರುತ್ತದೆ. ಯಾವ ವಿಚಾರದಲ್ಲಿ ನನ್ನ ತಮ್ಮ ಪ್ರತಿವಾದಿಗೆ ಮಾನನಷ್ಟ ನೊಟೀಸು ಕೊಟ್ಟರು ಎಂಬ ಬಗ್ಗೆ ನನಗೆ ಗೊತ್ತಿರುತ್ತದೆ . ಆ ಸಮಯದಲ್ಲಿ ಪ್ರತಿವಾದಿಯ ಮಾನ ಮಾರ್ಯಾದೆ ಹೊಗುತ್ತದೆ ನೋಟಿಸು ಕೊಡಬೇಡ ಎಂದು ನಾನು ಹೇಳಿಲ್ಲ . ಯಾವ ಕಾರಣಕ್ಕೆ ಆ ರೀತಿ ಪ್ರತಿವಾದಿಗೆ ನಿಮ್ಮ ತಮ್ಮ ಮನನಷ್ಟ ಮೊಕದಮ್ಮೆ ನೋಟಿಸು ಕೊಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಪ್ರತಿವಾದಿ ಗ್ರಾಮ ಪಂಚಾಯತಿ ನ ಉಪಾಧ್ಯಕ್ಷರಾಗಿ ನಮ್ಮ ಚರ್ಚ್ ಗ್ರೂಪ್‌ನ ವಾಟ್ಸ್ ಆಫ್ ನಲ್ಲಿ ಪಂಚಾಯತಿಗೆ

ಕಂದಾಯವನ್ನು ಯಾರು ಯಾರು ಕಟ್ಟಿಲ್ಲ ಎಂದು ಹಾಕಿದ್ದರು ಅದು ಚರ್ಚ್ ನ ವಾಟ್ಸ್ ಆಫ್ ಗ್ರೂಪ್ ಆಗಿದ್ದು ಆದ್ದರಿಂದ ನೋಟಿಸು ಕೊಟ್ಟಿದ್ದೇವೆ . ನಮ್ಮ ಆಸ್ತಿಗೆ ಸಂಬಂದಪಟ್ಟಂತೆ ಯಾವುದೇ ಮೇಸೆಜ್ ನ್ನು ಸದ್ರಿ ವಾಟ್ಸ್ ಆಫ್ ಗ್ರೂಪ್ ನಲ್ಲಿ ಹಾಕಿಲ್ಲ . ನಾನು 2022 ರಿಂದಆದಾಯ ತೆರಿಗೆ ಇಲಾಖೆಗೆ ರಿಟರ್ನ್ಸ್ ನ್ನು ಸಲ್ಲಿಸುತಿದ್ದೇನೆ . 2015 ರಿಂದ 2020 ರವರೆಗೆ ನನಗೆ ಎಷ್ಟು ಆದಾಯ ಇದೆ ಎನ್ನುವ ಬಗ್ಗೆ ನನ್ನ ಬಳಿ ಬ್ಯಾಂಕ್ ಸ್ಟೇಟ್ ಮೆಂಟ್ ಇರುತ್ತದೆ ಅದನ್ನು ಹಾಜರುಪಡಿಸುತ್ತೇನೆ . ಯಾವ ಯಾವ ದಿನಾಂಕದಂದು ಎಷ್ಟು ಎಷ್ಟು ಹಣ ಪ್ರತಿವಾದಿಗೆ ಕೊಟ್ಟಿದ್ದೇನೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ ಆದರೇ ಕೊನೆಯ ಬಾರಿಗೆ 1 ಲಕ್ಷ ಕರಾರು ಆಗುವಾಗ ಕೊಟ್ಟಿರುತ್ತೇನೆ . ಅದು ಕೂಡ ನಗದಿನ ರೂಪದಲ್ಲಿ ಕೊಟ್ಟಿರುತ್ತೇನೆ . 1 ಲಕ್ಷ ಗಳನ್ನು ಚೆಕ್ ನ ಮುಖೇನ ಕೊಡಲು ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವರು ನಗದಿನ ರೂಪದಲ್ಲಿ ಹಣ ಬೇಕು ಎಂದು ಕೇಳಿದರು ಎಂದು ತಿಳಿಸಿರುತ್ತಾರೆ . ನಗದಿನ ರೂಪದಲ್ಲಿ ಹಣ ಕೊಟ್ಟ ಬಗ್ಗೆ ನಾನು ರಸೀದಿ ಪಡೆಯಲಿಲ್ಲ . ಸಾಕ್ಷಿ ಮುಂದುವರಿದು ಆ ದಿನ ಕರಾರು ಮಾಡಿಕೊಂಡಿರುತ್ತೇವೆ . ಕಾಲಮಿತಿ ದಾಟಿ ದಾವೆ ಹಾಕಿರುವುದರಿಂದ ಸದ್ರಿ ಕರಾರು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ . ಪ್ರತಿವಾದಿಗೆ ಕೊಟ್ಟ 10 ಲಕ್ಷವನ್ನು ಪ್ರತಿವಾದಿ ಬಡ್ಡಿ ಸಮೇತ ವಾಪಸ್ಸು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿ 10 ಲಕ್ಷ ಮಾತ್ರ ವಾಪಸ್ಸು ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. 2015 ರಿಂದ 2020 ರವರೆಗೆ ನಾನು ಬೇರೆ ಬೇರೆ ದಿನಾಂಕಗಳಂದು ಹಣ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ . ನಾನು ಪ್ರತಿವಾದಿಯಿಂದ 10 ಲಕ್ಷದ ಬಾಬ್ತುಬಡ್ಡಿ ವಸೂಲಿ ಮಾಡಲು ಈ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಯಾವುದೇ ಹಣ ಕೊಡಲು ಬಾಕಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಸಂಪೂರ್ಣ ಹಣ ಸಂದಾಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ದಾವೆಯನ್ನು ಪ್ರತಿವಾದಿ ವಿರುದ್ಧ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ನ್ನು ನಾನು

ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ಕ್ಕು ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.